



ಎಡದಿಂದ ಬಲಕ್ಕೆ:

1. ಆತ ಪ್ರಸಿದ್ಧನಾಗಲು ಶೃಂಗಾರ ಸಾಮಗ್ರಿಗಳೇ ಕಾರಣ (4)
3. ಆತನಿಗೆ ಪಾಲಕರೇ ಇಲ್ಲವೆಂದರೆ ಹೇಗೆ? (3)
4. ಹಾರುವ ವಾಹನದಲ್ಲಿ ರಂಜನಾ ಓಡಾಟವೇ? (3)
6. ಕಡಿಮೆ ಮಾಡಲು ಅದು 'ಒಗೆದ ಬಟ್ಟೆ ತೆಗೆವ ದೊಣ್ಣೆ' (4)
7. ಮೂಕನೇ ಆದರೂ ಮನದ ತುಂಬ ಬರೀ ಆಸೆ (3)
9. ಹತ್ತಿರಕ್ಕೇ ಬಂದಿದ್ದ ಕೊಲೆಗಾರ (3)
11. ಗಡಿ ದಾಟಿದವರು ಕಂಡರೆ ಹೆದರಿಸು (3)
13. ಕೊರೆದು ತೆಗೆದದ್ದನ್ನೆಲ್ಲ ಚೆಲ್ಲಾಪಿಲ್ಲಿ ಮಾಡು (3)
15. ಮೋಜುಗಾರರ ಸಂಗ-ಬರೀ ಇರುಸು ಮುರುಸು (4)
17. ರಂಜನೀಯ ಚಿತ್ರಾರದಲ್ಲಿ ಉರುಳು (3)
18. ಈ ಸುರಂಗ ಕೊರೆದದ್ದು ಪಾರಾವಾರ (3)
19. ಜೋಡಿಸಲು ಸಾಧ್ಯವಿಲ್ಲ, ಎಲ್ಲೆಲ್ಲೂ ಕುದಿನೀರು (4)

ಮೇಲಿಂದ ಕೆಳಕ್ಕೆ:

1. ಪ್ರಾರ್ಥನೆ ಮಾಡುವ ಕೆಲಸವೇ ಮೊದಲಿನದು (3)
2. ನೂಲುವಾಗಲೆಲ್ಲ ಹಾಜರು-ಯಾವುದು ಈ ಹಕ್ಕಿ? (3)
3. ಅಸಮತೆಯ ನಿದರ್ಶನಗಳಿಗೆ ಕೊನೆಯೇ ಇಲ್ಲ ಬಿಡಿ (3)
5. ಅಂಥ ರಂಜನೆಗೆ ತಕ್ಕ ಉಡುಗೊರೆಗೆ ಬೆಳ್ಳಿಯೇ ಸರಿ (3)
7. ಕೊಳ್ಳಲಾಗದ್ದನ್ನು ಪಡೆಯಲು ಯುದ್ಧವೇ ಆದೀತು (3)
8. ರಥವನ್ನೆಳೆದವನ ಕೈಯೆಲ್ಲ ಬರೀ ಕೆನ್ನೀರು (3)
9. ಹೆಂಚು ಮಾರಿದ್ದಕ್ಕೆ ಬಂದದ್ದರ ವಿತರಣೆ (3)
10. ಸಕ್ಕರೆಯೆಂದು ರುಚಿ ನೋಡಿದರೆ ಬರೀ ಕಹಿ, ಒಗರು (3)
12. ಎಲ್ಲರೂ ಸೇರಿದಾಗ ನಡೆದದ್ದು ದಶದಿನಗಳ ಹಬ್ಬ (3)
14. ತೊರೆದು ಬರಲು ಕಾರಣ ವಿಷದ ಗಿಡ (3)
15. ಸುಮ್ಮನಾಗಿಸದಿದ್ದರೆ ಭಾರೀ ಕೋಪ ಬಂದೀತು (3)
16. ಸಾಲು ಮರಗಳ ತುಂಬ ಬರೀ ಮಾವಿನ ಫಲ (3)

### ಪದಬಂಧ 28-02-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಲಂಕಾರ; 3. ವಿರೋಧ; 4. ಕ್ಷಿತಿಜ; 6. ಮದರಾಸು; 7. ನೀರಾವರಿ; 8. ಅನಿಯತ; 10. ಕೆಟ್ಟಜನ; 12. ಪಿಚಕಾರಿ; 14. ಹಾಳುಬಾವಿ; 16. ನಲಿವು; 17. ವಾರಿಜ; 18. ಗೆಜ್ಜೆನಾದ.

ಮೇಲಿಂದ ಕೆಳಕ್ಕೆ:

1. ಅಧಮ; 2. ರಕ್ಷಿಸು; 3. ವಿಧಿವಶ; 5. ಜನನಿ; 7. ನೀರಡಿಕೆ; 9. ತರಕಾರಿ; 11. ಜವಾನ. 13. ಪಂಚಭುಜ; 14. ಹಾವುಗೆ; 15. ವಿವಾದ.

# ಪ್ರಶ್ನಾಂಕಣ

## 'ಎರಿಬಸ್' - ಅದೇನು?

ಮೂಲತಃ ಅದು ಗ್ರೀಕ್ ಪೌರಾಣಿಕ ದೇವತೆಯ ಹೆಸರು. ಕಾರ್ಗತ್ತಲ ಲೋಕದ ಅಧಿಪತಿಯಾಗಿರುವ ಗ್ರೀಕ್ ದೇವತೆಯೇ ಎರಿಬಸ್. ಆದರೆ ವಾಸ್ತವದಲ್ಲಿ ವಿಶಿಷ್ಟ ಅಗ್ನಿಪರ್ವತವೊಂದರ ಹೆಸರಾಗಿಯೇ ಅದು ಸುಪ್ರಸಿದ್ಧ. ಶಾಶ್ವತ ಹಿಮಲೋಕವಾದ ಅಂಟಾರ್ಕ್ಟಿಕಾದ 'ರಾಸ್ ದ್ವೀಪ'ದಲ್ಲಿರುವ ಈ ಅಗ್ನಿಪರ್ವತ 'ಧರೆಯ ಅತ್ಯಂತ ದಕ್ಷಿಣಕ್ಕಿರುವ ಜ್ವಾಲಾಮುಖಿ' ಎಂದೂ ಹೆಸರು ಗಳಿಸಿದೆ.

ಎರಿಬಸ್ ಪ್ರಥಮವಾಗಿ ಪತ್ತೆಯಾದದ್ದು 1841ನೇ ಇಸವಿಯಲ್ಲಿ. ಭೂಮಿಯ 'ದಕ್ಷಿಣ ಧ್ರುವ'ವನ್ನು ಮುಟ್ಟಿ ಬರುವ ಉದ್ದೇಶದಿಂದ ಸಾಹಸ ಯಾನ ಕೈಗೊಂಡ ವಿಖ್ಯಾತ ಬ್ರಿಟಿಷ್ ಅನ್ವೇಷಕ 'ಸರ್ ಜೇಮ್ಸ್ ಕ್ಲರ್ಕ್ ರಾಸ್' ಮತ್ತವನ ತಂಡ ಈ ಅಗ್ನಿ ಪರ್ವತವನ್ನು ಮೊತ್ತ ಮೊದಲಿಗೆ ಗುರುತಿಸಿದಾಗ ರಾಸ್ ತನ್ನ ಹಡಗಿನ ಹೆಸರನ್ನೇ (ಎರಿಬಸ್ ಎಂಬ ಹೆಸರನ್ನೇ) ಅದಕ್ಕೂ ಇಟ್ಟ. ಈಗ ತಿಳಿದಿರುವಂತೆ ಎರಿಬಸ್‌ನ ಸನಿಹದಲ್ಲೇ ಅದಕ್ಕಿಂತ ಕಡಿಮೆ ಉನ್ನತಿಯ ಇನ್ನೂ ಒಂದು ಅಗ್ನಿಪರ್ವತ ಇದೆ. 'ಟೆರರ್' (ಮಹಾಭಯ) ಎಂಬ ಹೆಸರಿನ ಆ ಅಗ್ನಿಪರ್ವತ ಪ್ರಸ್ತುತ ಸಂಪೂರ್ಣ ಮೃತ.



ಜೀವಂತ ಜ್ವಾಲಾಮುಖಿಯಾಗಿರುವ ಎರಿಬಸ್ ಜನ್ಮ ತಳೆದದ್ದು ಈಗ್ಗೆ ಹದಿಮೂರು ಲಕ್ಷ ವರ್ಷ ಹಿಂದೆ. ಅದರ ಈಗಿನ ಎತ್ತರ ಸಾಗರ ಮಟ್ಟದಿಂದ 12,448 ಅಡಿ. ಈ ಅಗ್ನಿಪರ್ವತದ ಆಂತರ್ಯದ ಬೆಂಕಿ-ಬೇಗುದಿ ಅದರ ಬಾಹ್ಯರೂಪದಲ್ಲಿ ಕಿಂಚಿತ್ತೂ ಗೋಚರವಿಲ್ಲ. ಏಕೆಂದರೆ ಸದಾ ಶೀತದ, ಮಂಜು- ಹಿಮ ಕವಿದ ಅಂಟಾರ್ಕ್ಟಿಕಾದ ಪರಿಸರದಲ್ಲಿ ಎರಿಬಸ್‌ನ ಹೊರ ಮೈಯೆಲ್ಲ ಶುಭ್ರ ಶ್ವೇತ, ಹಿಮಾವೃತ.

ಬಾಹ್ಯವಾಗಿ ಹಾಗಿದ್ದರೂ ಆಂತರ್ಯದ ತಳಮಳ ಉಲ್ಬಣಗೊಂಡಾಗ ಎರಿಬಸ್ ಬೆಂಕಿಯುಂಡೆಗಳಂತೆ ಕಾಣುವ ಶಿಲಾಪಾಕದ ತುಣುಕುಗಳನ್ನು ರಭಸದಿಂದ ಉಗಿಯುತ್ತದೆ. ಎರಿಬಸ್‌ನ ತನುವಿನ ಬಿರುಕುಗಳ ಮೂಲಕ ಚಿಮ್ಮುವ ನೀರಾವಿ ಕಾರಂಜಿಗಳು ತಕ್ಷಣಗಳಲ್ಲೇ ಘನರೂಪ ತಳೆದು ಹಿಮದ ನಾನಾ ರೂಪದ ಸ್ತಂಭಗಳಾಗಿ ನಿಲ್ಲುತ್ತವೆ. ಎರಿಬಸ್‌ನ ಮೈಯ ಎಷ್ಟೋ ಸ್ಥಳಗಳಲ್ಲಿ ಅಂತರಾಳದಿಂದ ಉಕ್ಕುವ ಶಾಖ ಧಾರೆಗಳು ಹಿಮದ ಕವಚವನ್ನು ಕರಗಿಸಿ ಕೊರೆದು ಗಟ್ಟಿ ಹಿಮ ಸುರಂಗಗಳನ್ನು- ಗುಹಾವ್ಯೂಹಗಳನ್ನು ನಿರ್ಮಿಸಿವೆ.

ಅದೆಲ್ಲ ವೈಚಿತ್ರ್ಯ ವೈಶಿಷ್ಟ್ಯ ವಿಸ್ಮಯಗಳ ಜೊತೆಗೆ ಅಂಟಾರ್ಕ್ಟಿಕಾದ 'ನಡುರಾತ್ರಿಯ ಸೂರ್ಯನ' ತಂಬೆಳಕಿನಲ್ಲಿ ಎರಿಬಸ್‌ನ ಗುಲಾಬಿ ವರ್ಣದ ರೂಪ- ಅದೊಂದು ಅತಿ ಭವ್ಯ ಅನನ್ಯ ಸೌಂದರ್ಯ.

■ ಎನ್. ವಾಸುದೇವ್